<u>ದಿನಾಂಕಃ **03.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು</u>.

<u>ಮುಂದುವರೆದ ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ಶ್ರೀ.ಎಮ್ .ವಿ.ಆರ್ ವಕೀಲರಿಂದಃ</u>

ನಿಪಿ-6 ಮತ್ತು 7 ರಲ್ಲಿರುವ (ಶಿವಲಿಂಗಂ) ಪ್ರತಿವಾದಿ 1 ರವರ ಸಹಿಗಳು ಬೇರೆ ಬೇರೆ ರೀತಿ ಇವೆ ಎಂದರೆ ಸರಿಯಲ್ಲ. ಎರಡು ದಾಖಲೆಗಳಲ್ಲಿ ಪ್ರತಿವಾದಿ 1 ರವರೆ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ನಿಪಿ-6 ಮತ್ತು 7 ನ್ನು ಪರಿಶೀಲಿಸಿ ಹೇಳಿರುತ್ತಾರೆ. ನಿಪಿ-7 ನೊಂದಣಿ ಆಗಿಲ್ಲ ಎಂದರೆ ಅವರು ನೊಂದಣಿ ಮಾಡಿಕೊಟ್ಟಿಲ್ಲ, ನಮ್ಮ ಅಣ್ಣ ತೀರಿಕೊಂಡ ಅವನು ನೊಂದಣಿ ಮಾಡಿಸಿಕೊಟ್ಟಿಲ್ಲ. ನೀವು ಪುಟ ಸಂಖ್ಯೆ-4, ಪ್ಯಾರಾ 7 ರಲ್ಲಿ ನಿಪಿ-7 ನೊಂದಣಿ ಆಗಿದೆ ಎಂದು ಹೇಳಿದ್ದಾರೆ ಎಂದರೆ ಅದನ್ನು ಉಪ-ನೊಂದಣಾಧಿಕಾರಿಗಳ ಕಚೇರಿಯಲ್ಲಿ ಮಾಡಿಕೊಟ್ಟಿದ್ದರಿಂದ ನೊಂದಣಿ ಆಗಿದೆ ಎಂದು ಹೇಳಿದ್ದೇನೆ. ವಿಭಾಗ ಪತ್ರ ಆದಾಗ ಬಾಲು ಮತ್ತು ಕೃಷ್ಣವೇಣಿ ಜೀವಂತವಾಗಿದ್ದರು ಎಂದರೆ ಸರಿ. ವಿಭಾಗ ಪತ್ರ ಆಗಿರುವ ನಿಜಾಂಶ ಬಾಲು ಮತ್ತು ಕೃಷ್ಣವೇಣಿ ರವರಿಗೆ ಚೆನ್ನಾಗಿ ಗೊತ್ತಿತ್ತು ಎಂದರೆ ಸರಿ. ಅವರಿಬ್ಬರೂ ಈಗ ತೀರಿಹೋಗಿದ್ದ ಕಾರಣ ನೀವು ಅನಗತ್ಯ ಉಪಯೋಗಕ್ಕೆ (Undue advantage)ಗೆ ಬಳಸಕೊಳ್ಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಪಿ-7 ನಿಮಗೆ ಬಾಲು ಆಗಲಿ ಅಥವಾ ಶಿವಲಿಂಗಂ ರವರು ಬರೆದುಕೊಟ್ಟಿಲ್ಲ ಮತ್ತು ನೀವು ಸುಳ್ಳು ದಾಖಲೆಯನ್ನು ಹಾಜರು ಪಡಿಸಿದ್ದೀರಿ ಎಂದರೆ ಸರಿಯಲ್ಲ. ಬಾಲು ಆಗಲಿ ಅಥವಾ ಶಿವಲಿಂಗಂ ರವರ ಕುಟುಂಬದವರಾಗಲಿ ಯಾವುದೇ ಪಾಲು ಕೊಡಬೇಕಾಗಿಲ್ಲ ನೀವು ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಭಾಗವನ್ನು ನೀವು ಈಗಾಗಲೇ

ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**